# ಕೃಷಿ ವಿಶ್ವವಿದ್ಯಾಲಯ, ಧಾರವಾಡ
## ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ

E-mail : bijapuragromet@rediffmail.com Website : http://www.agrometbijapur.org
ದೂರವಾಣಿ: 08352 : 209624 ಫ್ಯಾಕ್ಸ : 08352–230594


## ಗದಗ ಜಿಲ್ಲೆಗಾಗಿ ಹವಾಮಾನ ಆಧಾರಿತ ಕೃಷಿ ಸಲಹೆಗಳು ದಿನಾಂಕ : 11-08-2020

### ಗದಗ ಜಿಲ್ಲೆಯಲ್ಲಿ 04/08/2020 ರಿಂದ 10/08/2020 ರ ಅವಧಿಯಲ್ಲಿಯ ಹವಾಮಾನ ಮಾಹಿತಿ

| | | | |
|---|---|---|---|
| ಮಳೆಯ ಪ್ರಮಾಣ | 36.5 ಮಿ.ಮೀ. | ಬೆಳಗಿನ ಆರ್ದ್ರತೆಯ ಪ್ರಮಾಣ | ಪ್ರತಿಶತ 87 ರಿಂದ 92 |
| ಹಗಲಿನ ಉಷ್ಣಾಂಶ | 23.6 ಸೆ ದಿಂದ 29.2$^{0}$ ಸೆ | ಮಧ್ಯಾನ್ಹದ ಆರ್ದ್ರತೆಯ ಪ್ರಮಾಣ | ಪ್ರತಿಶತ 75 ರಿಂದ 93 |
| ರಾತ್ರಿಯ ಉಷ್ಣಾಂಶ | 21.2$^{0}$ ಸೆ. ದಿಂದ 22.3$^{0}$ ಸೆ | ಗಾಳಿಯ ವೇಗ | ಪ್ರತಿ ಘಂಟೆಗೆ 8.0 ದಿಂದ 20.0 ಕಿ. ಮೀ. |
| ಮೋಡದ ಪ್ರಮಾಣ | 7 ರಿಂದ 8 ಆಕ್ಟಾ | | |

### ಗದಗ ಜಿಲ್ಲೆಗಾಗಿ ಮುಂದಿನ ಐದು ದಿನಗಳಿಗೆ, ಭಾರತ ಹವಾಮಾನ ವಿಭಾಗವು ನೀಡಿದ ಹವಾಮಾನ ಮುನ್ಸೂಚನೆ

| ಹವಾಮಾನದ ಅಂಶಗಳು | ದಿನಾಂಕ | | | | |
|---|---|---|---|---|---|
| | ಆಗಸ್ಟ 12 | ಆಗಸ್ಟ 13 | ಆಗಸ್ಟ 14 | ಆಗಸ್ಟ 15 | ಆಗಸ್ಟ 16 |
| ಮಳೆಯ ಪ್ರಮಾಣ (ಮಿ.ಮಿ.) | 1 | 1 | 1 | 1 | 1 |
| ಹಗಲಿನ ಉಷ್ಣಾಂಶ ($^{0}$ಸೆ) | 27 | 27 | 28 | 28 | 28 |
| ರಾತ್ರಿಯ ಉಷ್ಣಾಂಶ ($^{0}$ಸೆ)) | 21 | 21 | 21 | 21 | 22 |
| ಬೆಳಗಿನ ಆರ್ದ್ರತೆಯ ಪ್ರಮಾಣ (%) | 88 | 88 | 87 | 87 | 87 |
| ಮಧ್ಯಾನ್ಹದ ಆರ್ದ್ರತೆಯ ಪ್ರಮಾಣ (%) | 82 | 82 | 80 | 80 | 80 |
| ಗಾಳಿಯ ವೇಗ (ಕಿ.ಮೀ./ಘಂ.) | 16 | 16 | 15 | 16 | 17 |
| ಗಾಳಿಯ ದಿಕ್ಕು (ಡಿಗ್ರಿ) | 248 | 248 | 248 | 248 | 248 |
| ಮೋಡದ ಪ್ರಮಾಣ ( ಆಕ್ಟಾ) | 8 | 8 | 7 | 8 | 7 |

ಮುನ್ಸೂಚನೆಯ ಸಾರಾಂಶ : ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಂದು ಜಿಲ್ಲೆಗೆ ನೀಡಿದ ಮುನ್ಸೂಚನೆಯಂತೆ ಹೆಚ್ಚಾಗಿ ಮೋಡ ಕವಿದ ವಾತಾವರಣ ಇದ್ದು, ಕೆಲವೆಡೆ ಅಲ್ಪ ಪ್ರಮಾಣದಲ್ಲಿ ಮಳೆ ಆಗುವ ಸಾಧ್ಯತೆಗಳಿವೆ. ಹಗಲಿನ ಉಷ್ಣಾಂಶ ಸರಾಸರಿ 27.0 ರಿಂದ 28.0$^{0}$ ಸೆ, ರಾತ್ರಿಯ ಉಷ್ಣಾಂಶ 21.0 ರಿಂದ 22.0$^{0}$ ಸೆ, ಬೆಳಗಿನ ಆರ್ದ್ರತೆ ಪ್ರತಿಶತ 87 ರಿಂದ 88, ಮಧ್ಯಾನ್ಹದ ಆರ್ದ್ರತೆ ಪ್ರತಿಶತ 80 ರಿಂದ 82 ವರೆಗೆ ಇರುವ ಮುನ್ಸೂಚನೆ ಇದೆ.

### ಹವಾಮಾನ ಆಧಾರಿತ ಕೃಷಿ ಸಲಹೆಗಳು

ಸಸ್ಯ ಸಂರಕ್ಷಣೆ : ಮುನ್ಸೂಚನೆಯಂತೆ ಮುಂದಿನ ಐದು ದಿನಗಳಂದು ಜಿಲ್ಲೆಯಲ್ಲಿ ಹೆಚ್ಚಾಗಿ ಮೋಡ ಕವಿದ ವಾತಾವರಣ ಇದ್ದು, ಕೆಲವೆಡೆ ಅಲ್ಪ ಪ್ರಮಾಣದಲ್ಲಿ ಮಳೆ ಆಗುವ ಸಾಧ್ಯತೆಗಳಿವೆ. ಸಸ್ಯ ಸಂರಕ್ಷಣಾ ಕ್ರಮಗಳನ್ನು ಜಾಗರೂಕತೆಯಿಂದ, ಬೆಳಗಿನ ಸಮಯದಲ್ಲಿ, ಸಿಂಪರಣಾ ಮಿಶ್ರಣಕ್ಕೆ ಅಂಟು ದ್ರಾವಣವನ್ನು ಬೆರೆಸಿ ಕೈಕೊಳ್ಳಬೇಕು.

ಮುಂಗಾರು ಬಿತ್ತನೆ : **ಕಡಿಮೆ ಆಳದ ಕಪ್ಪು ಹಾಗೂ ಉಸುಕು ಮಿಶ್ರಿತ ಕೆಂಪು ಮಣ್ಣಿನಲ್ಲಿ ಸೂರ್ಯಕಾಂತಿ, ಔಡಲ, ದೇಶಿ ಹತ್ತಿ ,ಹುರುಳಿ, ಸಾವಿ/ನವಣೆ, ಸೂರ್ಯಕಾಂತಿ + ಔಡಲ, ಮೇವಿನ ಬೆಳೆಗಳ ಬಿತ್ತನೆಯನ್ನು ಕೈಕೊಳ್ಳಬಹುದು.**

**ಮಧ್ಯಮ ಆಳದ ಕಪ್ಪು ಮಣ್ಣು, ಆಳವಾದ ಕಪ್ಪು ಮಣ್ಣು ಹಾಗೂ ಉಸುಕು ಮಿಶ್ರಿತ ಜೇಡಿ ಮಣ್ಣಿನಲ್ಲಿ ದೇಶೀ ಹತ್ತಿ ಅಥವಾ ಮುಂಗಾರಿಯಲ್ಲಿ ಬಿತ್ತನೆ ಮಾಡದೇ, ಚೌಕು ಮಡಿ ಅಥವಾ ಹರಿ ತ್ತು ಬೋದುಗಳನ್ನು ನಿರ್ಮಿಸಿ, ಮುಂಗಾರು ಮಳೆಯ ನೀರನ್ನು ಮಣ್ಣಿನಲ್ಲಿ ಸಂಗ್ರಹಿಸಬೇಕು. ನಂತರ ಹಿಂಗಾರಿ ಬೆಳೆಗಳ ಬಿತ್ತನೆ ಮಾಡಬೇಕು.**
**ಗೆಜ್ಜೆ ಶೇಂಗಾ : 8 ಬೆಳೆ ಸಾಲುಗಳ ನಂತರ ಒಂದು ನೀರು ಸಂರಕ್ಷಣಾ ಹರಿಯನ್ನು ನಿರ್ಮಿಸಬೇಕು.**

- **ಶೇಂಗಾ, ಹೊಲದ ಸುತ್ತಲೂ ಎರಡು ಸಾಲು ದಟ್ಟವಾಗಿ ಸಜ್ಜೆ, ಮೆಕ್ಕೆ ಜೋಳವನ್ನು ತಡೆ ಬೆಳೆಯಾಗಿ ಬೆಳೆಯಬೇಕು. ಇದರಿಂದ ಕೀಟಗಳ ಬಾಧೆ ಕಡಿಮೆ ಆಗುವುದು. ತೊಗರಿ ಬೀಜದ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಬಂಕಣ ಜೋಳದ ಬೀಜವನ್ನು ಬೆರೆಸಿ ಬಿತ್ತಬೇಕು. ಇದು, ನಂತರದ ದಿನಗಳಲ್ಲಿ, ಕಾಯಿ ಕೊರಕ ಕೀಟದ ನಿಯಂತ್ರಣದಲ್ಲಿ ಸಹಕಾರಿಯಾಗುವುದು.**
- **ಸಿಫಾರಸು ಮಾಡಿದ, ಪ್ರಮಾಣಿಕೃತ ಬೀಜಗಳನ್ನು ಅಧೀಕೃತ ವ್ಯಾಪಾರಿಗಳಿಂದ ಖರೀಧಿಸಿ ರಸೀಧಿ ಪಡೆಯಬೇಕು.**

# ಕೃಷಿ ಸಲಹೆಗಳು

## ಕ್ಷೇತ್ರ ಬೆಳೆಗಳು

| | |
|---|---|
| ಬೀಜೋಪಚಾರ: | ಬಿತ್ತನೆ ಮಾಡುವಾಗ ಏಕದಳ ಧಾನ್ಯದ ಬೀಜಗಳಿಗೆ ಅಝೋಸ್ಪಿರಿಲಮ್ + ಪಿಎಸ್‌ಬಿ ಹಾಗೂ ದ್ವಿದಳ ಧಾನ್ಯದ ಬೀಜಗಳಿಗೆ ರೈಝೋಬಿಯಮ್ + ಪಿಎಸ್‌ಬಿಯಿಂದ ಉಪಚಾರ ಮಾಡಿ ಬಿತ್ತಬೇಕು. ಬಿತ್ತುವ ಮುನ್ನ ಎಲ್ಲಾ ಬೆಳೆಗಳ ಬೀಜಗಳಿಗೆ ಕ್ಯಾಪ್ಟಾನ್ ಅಥವಾ ಥೈರಾಮ್ ಅಥವಾ ಕಾರ್ಬನ್‌ಡೈಜಿಮ್ ಪುಡಿಯನ್ನು ಪ್ರತಿ ಕಿ. ಗ್ರಾಂ ಬೀಜಕ್ಕೆ ೨ ಗ್ರಾಂ ನಂತೆ ಅಥವಾ ಟ್ರೈಕೊಡರ್ಮಾ ೪ ಗ್ರಾಂ ನಂತೆ ಉಪಚರಿಸಿ ಬಿತ್ತುವುದರಿಂದ ಬೆಳೆಗಳಿಗೆ ಮುಂದೆ ತಗುಲಬಹುದಾದ ರೋಗಗಳನ್ನು ತಡೆಗಟ್ಟಬಹುದು. |
| ಸೂರ್ಯಕಾಂತಿಯಲ್ಲಿ ಬೀಜೋಪಚಾರ | • ಬಿತ್ತುವ ಮುನ್ನ ಪ್ರತಿ ಕಿ.ಗ್ರಾಂ ಸೂರ್ಯಕಾಂತಿ ಬೀಜವನ್ನು 1.5 ಲೀಟರ ನೀರಿನಲ್ಲಿ 30 ಗ್ರಾಂ ಕ್ಯಾಲ್ಸಿಯಂ ಕ್ಲೋರೈಡ ಬೆರೆಸಿ ತಯಾರಿಸಿದ ದ್ರಾವಣದಲ್ಲಿ 8 ಗಂಟೆಗಳ ಕಾಲ ನೆನೆಸಿ, ನೆರಳಿನಲ್ಲಿ ಒಣಗಿಸಿ, ನಂತರ ಪ್ರತಿ ಕೆ.ಜಿ ಬೀಜಕ್ಕೆ 5.0 ಗ್ರಾಂ ಇಮಿಡಾಕ್ಲೋಪ್ರಿಡ್ ಔಷಧಿಯಿಂದ ಹಾಗೂ 40 ಗ್ರಾಂ ಅಜೋಸ್ಪಿರಿಲ್ಲಮ್ ಜೈವಿಕ ಗೊಬ್ಬರದಿಂದ ಉಪಚರಿಸಿ ಬಿತ್ತಬೇಕು. ಇದರಿಂದ ಬೀಜದ ಮೊಳಕೆಯ ಪ್ರಮಾಣ, ಸಸಿಗಳ ಬೆಳವಣಿಗೆ ಹಾಗೂ ಇಳುವರಿ ಸುಧಾರಿಸುವುದಲ್ಲದೇ, ಬೆಳೆಗೆ ಕೀಟದ ಬಾಧೆ ಕಡಿಮೆಯಾಗಿವದು ಮತ್ತು ಬರ ತಡೆದುಕೊಳ್ಳವ ಶಕ್ತಿ ಬರುವದು ಹಾಗೂ ಬೆಳೆಗೆ ಬೇಕಾಗುವ ಸಾರಜನಕದ ಪ್ರಮಾಣದಲ್ಲಿ ಪ್ರತಿಶತ 25 ರಷ್ಟು ಉಳಿತಾಯವಾಗುವದು.<br>• **ಈ ಒಳಗಾಗಿ ಬಿತ್ತಿದ ಬೆಳೆಯಲ್ಲಿ ನೆಕ್ರೊಸಿಸ್ ನಂಜಾಣು ರೋಗದ ನಿಯಂತ್ರಣಕ್ಕಾಗಿ, ರೋಗ ಬಾಧಿತ ಗಿಡಗಳನ್ನು ಕಿತ್ತು ನಾಶ ಪಡಿಸಬೇಕು. ನಂತರ, ಬೆಳೆಗೆ ಪ್ರತಿ ಲೀಟರ ನೀರಿನಲ್ಲಿ 0.5 ಮಿ.ಲೀ. ಇಮಿಡಾಕ್ಲೋಪ್ರಡ್ ಬೆರೆಸಿ ಸಿಂಪಡಿಸಬೇಕು.** |
| ಗೋವಿನ ಜೋಳ | ➢ ಫಾಲ್ ಸೈನಿಕ ಹುಳುವಿನ ನಿರ್ವಹಣೆಗಾಗಿ ರೈನಾಕ್ಸಿಫೈರ 2.0 ಮಿ.ಲೀ. ಅಥವಾ ಇಮಾಮೆಕ್ಟನ್ ಬೆಂಜೋಯೇಟ 2.0 ಗ್ರಾಂ ಅಥವಾ ಪೈನೋಟೆರಾನ್4.0ಮಿ.ಲೀ ಪ್ರಿ 10 ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು. |
| **ಈರುಳ್ಳಿ** | ➢ **ಈರುಳ್ಳಿಯಲ್ಲಿ ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 0.2 ಗ್ರಾಂ ಥೈಯಾಮೆಥಾಕ್ಸಾಮ್ ಬೆರೆಸಿ ಸಿಂಪಡಿಸಬೇಕು.**<br>➢ **ಈರುಳ್ಳಿಯಲ್ಲಿ ಎಲೆ ತುದಿ ಸುಡುವ ರೋಗದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 1 ಗ್ರಾಂ ಬೋರಾನ್ + 2.0 ಗ್ರಾಂ ಹೆಕ್ಸಾಕೋನೋಜೋಲ ಮತ್ತು ಕ್ಯಾಪ್ಟಾನ್ ಮಿಶ್ರಿತ ಶಿಲೀಂದ್ರನಾಶಕ ಮತ್ತು 0.2 ಗ್ರಾಂ ಥೈಯಾಮೆಥಾಕ್ಸಾಮ್ ಬೆರೆಸಿ ಸಿಂಪಡಿಸಬೇಕು.**<br>➢ **ಈರುಳ್ಳಿಯಲ್ಲಿ ಬೂದು ತುಪ್ಪಟ ರೋಗದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 2.5 ಮಿ.ಲೀ. ಮೆಟಲಾಕ್ಸಿಲ್ ಬೆರೆಸಿ ಸಿಂಪಡಿಸಬೇಕು.** |
| **ಹತ್ತಿ** | ➢ **ಎಲೆಚುಕ್ಕೆ ರೋಗದ** ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ, 2 **ಗ್ರಾಂ ಡೈಥೇನ್-ಎಮ್-45, ಅಥವಾ 1 ಮಿ.ಲೀ. ಹೆಕ್ಸಾಕೊನಜೋಲ್** ಬೆರೆಸಿ ಸಿಂಪಡಿಸಬೇಕು. |
| **ಹೆಸರು -** | ➢ **ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ 0.20 ಗ್ರಾಂ. ಥೈಮಿಥೋಕ್ಸ್ಯಾಮ್ ಅಥವಾ 0.25 ಗ್ರಾಂ ಎಶಿಟಮಾಪ್ರಿಡ್ ಬೆರೆಸಿ ಸಿಂಪಡಿಸಬೇಕು.**<br>➢ **ಬೂದುರೋಗದ ನಿಯಂತ್ರಣಕ್ಕೆ ಪ್ರತಿ ಲೀಟರ ನೀರಿನಲ್ಲಿ 1 ಮಿ.ಲೀ. ಹೆಕ್ಸಾಕೊನಝೋಲ ಬೆರೆಸಿ ಸಿಂಪಡಿಸಿ** |
| ಹತ್ತಿ/ತೊಗರಿ/ಶೇಂಗಾ | ➢ ರಸ ಹೀರುವ ಕೀಟದ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ, 0.3 ಮಿ.ಲೀ. ಇಮಿಡಾಕ್ಲೊಪ್ರಿಡ್ ಅಥವಾ 0.25 ಗ್ರಾಂ ಥೈಮಿಥೋಕ್ಸಿಕ್ಯಾಮ ಬೆರೆಸಿ ಸಿಂಪಡಿಸಬೇಕು. |
| ತೊಗರಿ | ➢ ಅಂತರ ಬೇಸಾಯ ಮಾಡಿ, ಕೈಕಳೆ ತೆಗೆದು, ಡಿಎಪಿ ಮೇಲುಗೊಬ್ಬರವನ್ನು ಕೊಡಬೇಕು.<br>➢ 50 ದಿವಸದ ಬೆಳೆಯಲ್ಲಿ ಮೇಲಿನ ಕುಡಿ ಚಿವುಟಬೇಕು. ಇದರಿಂದ ಟೊಂಗೆಗಳ ಸಂಖ್ಯೆ ಹೆಚ್ಚಿಗೆ ಆಗಿ, ಹೆಚ್ಚು ಕಾಯಿ ಹಿಡಿದು, ಇಳುವರಿ ಹೆಚ್ಚಿಗೆ ಆಗಲು ಸಹಾಯವಾಗುತ್ತದೆ. |

*ಮಣ್ಣು ಮತ್ತು ನೀರಿನ ಸಂರಕ್ಷಣೆ :*

ಇಳುಕಲಿಗೆ ಅಡ್ಡವಾಗಿರುವ ಸಾಲುಗಳಲ್ಲಿ ಬಿತ್ತನೆ ಮಾಡಬೇಕು. ಇದರಿಂದ ಮಣ್ಣಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೇವಾಂಶವು ಸಂಗ್ರಹವಾಗುವದು. ಹೊಲದ ಬದುವು ಮತ್ತು ನೀರು ತಡೆ ಒಡ್ಡುಗಳ ರಿಪೇರಿ ಕೆಲಸವನ್ನು ಕೈಕೊಳ್ಳಬೇಕು. ಹಿಂಗಾರು ಬೆಳೆ ಮಾತ್ರ ಬೆಳೆಯಬೇಕೆಂದಿರುವ ಜಮೀನಿನಲ್ಲಿ ಇಳುಕಲಿಗೆ ಅಡ್ಡವಾಗಿ ರೆಂಟೆ ಹೊಡೆದು ಇಡುವುದರಿಂದ ನೀರು ಹಾಗೂ ಮಣ್ಣಿನ ಸಂರಕ್ಷಣೆಯಾಗಿ ಹಿಂಗಾರಿ ಬೆಳೆಗಳ ಇಳುವರಿ ಹೆಚ್ಚಿಗೆ ಆಗುವದು.

**ಪಶು ಸಂಗೋಪನೆ :**

- ಎಲ್ಲ ಜಾನುವಾರುಗಳಿಗೆ ಜಂತು ನಾಶಕ ಔಷಧಿ ಹಾಗೂ ಕಾಲು ಮತ್ತು ಬಾಯಿ ಬೇನೆ , ಚಪ್ಪೆ ಬೇನೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಸೂಕ್ತ ಚುಚ್ಚುಮದ್ದನ್ನು ಹಾಕಿಸಬೇಕು. ಆಡು ಮತ್ತು ಕುರಿಗಳಿಗೆ ಎಂಟರೊಟಾಕ್ಸೀಮಿಯಾ ರೋಗ ನಿರೋಧಕ ಹಾಕಿಸಬೇಕು.
- ಎರೆಹುಳು ಕುಣಿಗಳಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದಲ್ಲಿ ತೇವಾಂಶ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು.
- ಹಾಲು ಕೊಡುವ ರಾಸುಗಳಿಗೆ ನಿಯಮಿತವಾಗಿ 1 ಕಿ.ಗ್ರಾಂ ಪಶು ಆಹಾರ + ಪ್ರತಿ ಲೀಟರ ಹಾಲಿನ ಇಳುವರಿಗೆ 50 ಗ್ರಾಂ ನಂತೆ ಲವಣಗಳ ಮಿಶ್ರಣವನ್ನು ತಪ್ಪದೇ ಕೊಡಬೇಕು ಹಾಗೂ ಎಲ್ಲ ದನ ಕರುಗಳಿಗೆ ಹಸಿರು ಮೇವು ಹಾಗೂ ಒಣ ಮೇವುಗಳನ್ನು ಕೊಡಬೇಕು.

<u>ಮಾಹಿತಿಯನ್ನು ಬಿತ್ತರಿಸಲು/ಪ್ರಕಟಿಸಲು/ಪ್ರಚಾರಪಡಿಸಲು ಕೋರಿ ಸಲ್ಲಿಸಲಾಗಿದೆ</u> (1) ವರದಿಗಾರರು, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ವಿಜಯ ಕರ್ನಾಟಕ ಹಾಗೂ ಪ್ರಜಾ ವಾಣಿ ಕನ್ನಡ ದಿನಪತ್ರಿಕೆ, ಗದಗ. (2) ಕೃಷಿ ವಿಜ್ಞಾನ ಕೇಂದ್ರ, ಗದಗ (3) ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಗದಗ (4) E-TV ಕನ್ನಡ, ಅನ್ನದಾತಾ, ಹೈದರಾಬಾದ (5) ಭಾರತ ಹವಾಮಾನಶಾಸ್ತ್ರ ಇಲಾಖೆ ಬೆಂಗಳೂರು/ಪೂನಾ

ಸಂಪರ್ಕ ಅಧಿಕಾರಿ
ಕೃಷಿ ಹವಾಮಾನಶಾಸ್ತ್ರ ವಿಭಾಗ,
ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ